





ಕಲೆ ಎನ್ನುವುದು ಆಸಕ್ತಿ. ಇಲ್ಲಿ ಸೃಜನಶೀಲತೆ, ಚಾಕಚಕ್ಯತೆ, ಕರಕುಶಲಗಾರಿಕೆ ಮೇಲಾಗಿ ಸಮಯಪ್ರಜ್ಞೆ ಕೆಲಸ ಮಾಡುತ್ತದೆ. ಕಸದಿಂದ ರಸ, ಕಸದಿಂದ ಕಲೆ ಅರಳಿಸುವುದು ಒಂದು ಹವ್ಯಾಸ. ನಿರುಪಯುಕ್ತ ವಸ್ತುವಿಗೆ ಜೀವ ತುಂಬಿ ಕಲೆಯ ಬಲೆಯ ಹೆಣೆಯಲು ಕೌಶಲ, ತಾಳ್ಮೆ, ಪರಿಶ್ರಮ ಬೇಕು. ಇವೆಲ್ಲವನ್ನೂ ನಿರೀಕ್ಷಿಸುವ ಕಲೆಗಾರಿಕೆಯಿಂದ ಅನೇಕ ಜನರ ಜೀವನ ನಿರ್ವಹಣೆಯೂ  ಸಾಧ್ಯ, ನೂರಾರು ಜನರ ಕಣ್ಮನ ಸೆಳೆಯಲೂ ಸಾಧ್ಯ.

ಮಲೆನಾಡು ಕರಾವಳಿಯ ತೋಟಗಳಲ್ಲಿ ಕಳೆ ಬಳ್ಳಿಯಂತೆ ನೋಡಿ ಕಿತ್ತು ಅಡಕೆ ಮರದ ಬುಡಕ್ಕೊ ತೆಂಗಿನ ಮರದ ಹೊಂಡಕ್ಕೊ ಬಿಸಾಡುವ ಹಿಂಡಲೆಯ ಉಪಯೋಗ ದೀಪಾವಳಿ ಹಬ್ಬ ಬಿಟ್ಟರೆ ದನಕರುಗಳ ಮೇವಿಗೂ ಉಪಯೋಗಿಸದ ನಿರುಪಯೋಗಿ! ಆದರೆ ಈ  ನಿರುಪಯೋಗಿ ಬಳ್ಳಿಯ ಫಲದ ಬೀಜಕ್ಕೆ ಜೀವ ತುಂಬಿ ಸಹಸ್ರಾರು ಜನರು ಕಣ್ಣು ತುಂಬಿಸಿ ಕೊಳ್ಳುವಂತೆ ಮಾಡುವದು ಸುಲಭದ ಮಾತಲ್ಲ. ಈ ಕಾಯಕವನ್ನು ಕಾರ್ಯರೂಪಕ್ಕೆ ತಂದು ಹಲವಾರು ರಂಗೋಲಿ ಸ್ಪರ್ಧೆಗಳಲ್ಲಿ ಬಹುಮಾನ ಗಳಿಸಿಕೊಂಡು ಭೇಷ್ ಅನಿಸಿಕೊಂಡವರೆ ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲೂಕಿನ ನಂದೊಳ್ಳಿಯ ನಡುತೋಟದ ವಿದ್ಯಾ ಮಂಜುನಾಥ ಹೆಬ್ಬಾರ.

ಓದಿದ್ದು ಸ್ನಾತಕೋತ್ತರ ಪದವಿ. ಬೆಂಗಳೂರಿನ ಮಹಾ ನಗರಿಯಲ್ಲಿ ಕೆಲ ವರುಷ ಕೆಲಸ ಮಾಡಿದರೂ ಕೃಷಿ ಸೆಳೆತ ಮತ್ತೆ ಮಲೆನಾಡಿನ ಮನೆ ಸೇರುವಂತೆ ಮಾಡಿತು. ಎಲ್ಲಾ ಪದವಿಗಿಂತಲೂ 'ಕೃಷಿ ಮಹಿಳೆ' ಪದವಿಯೇ ಶ್ರೇಷ್ಠ ಎನ್ನುವ  ವಿದ್ಯಾ ಮಂಜುನಾಥ ಹೆಬ್ಬಾರರಿಗೆ ರಂಗೋಲಿ, ಪೆನ್ಸಿಲ್ ಸ್ಕೆಚ್, ಕಸೂತಿ ಮುಂತಾದವುಗಳಲ್ಲಿ ತೀರಾ ಆಸಕ್ತಿ.

ಸಿಂಡಲೆಕಾಯಿ ಮತ್ತು ಹಿಂಡಲೆಕಾಯಿ ಎಂದು ಕರೆಯಲ್ಪಡುವ ಈ ಫಲ ಸೌತೆ ಜಾತಿಗೆ ಸೇರಿದ್ದು ಬಳ್ಳಿ, ಎಲೆ, ಹೂವು, ಕಾಯಿ ಎಲ್ಲವು ಕಹಿ! ಇದರ ಬೀಜವನ್ನೆ ಹದವಾಗಿ ಒಣಗಿಸಿ ರಂಗೋಲಿಗೆ ಬಳಸುವ ವಿದ್ಯಾ ಇದರಿಂದ ಅನೇಕ ರೀತಿಯ ಆಕರ್ಷಕ ರಂಗೋಲಿ ಬಿಡಿಸುತ್ತಾರೆ. ಈ ಬೀಜಗಳೇ ವಿದ್ಯಾರವರ ಕೈಚಳಕದಿಂದ ಆರತಿ ಬಟ್ಟಲು, ಬಾತು, ನವಿಲು ಹೀಗೆ ಅನೇಕ ಬಗೆಯ ರೂಪ ತಾಳುತ್ತವೆ.

